### ಮಾಹಿತಿ ಕಣಜ

‘ವಿಶ್ವ ವಿಜ್ಞಾನ ಪಥ; ಕರುನಾಡ ರಥ’ (ಮಾ. 06, ಗುರುರಾಜ ಎಸ್. ದಾವಣಗೆರೆ) ಮುಖಪುಟ ಲೇಖನ ಕನ್ನಡದ ವಿಜ್ಞಾನಿಗಳ ಬಗ್ಗೆ ಉಪಯುಕ್ತ ಮಾಹಿತಿ ನೀಡಿರುವುದು ಉಚಿತವಾಗಿದೆ. ಪ್ರತಿ ವಾರವೂ ಈ ಶೀರ್ಷಿಕೆಯಡಿ ಒಬ್ಬೊಬ್ಬರ ಪರಿಚಯಾತ್ಮಕ ಬರಹವಿದ್ದರೆ ಆಸಕ್ತರಿಗೆ ಸಂಗ್ರಹಿಸಲು ಹೆಚ್ಚಿನ ಮಾಹಿತಿ ಕಣಜವಾಗುತ್ತಿತ್ತು.

—ಮೈ. ಸತೀಶ ಕುಮಾರ, ಬಂಗಾರಪೇಟೆ




### ಜಾಡು- ಹಾಡು

‘ಆಡು ಮುಟ್ಟದ ಸೊಪ್ಪಿಲ್ಲ’, ನಿಜ, ಆದರೆ ಇವು ಕೇವಲ ಆಡುಗಳೆ? ‘ವಿಶ್ವ’ ವಿಜ್ಞಾನ, ತಂತ್ರಜ್ಞಾನ ರಥದ ಕನ್ನಡ ಅಶ್ವಗಳು! (ಜಗತ್ತಿನ ಜಾಡು, ಕರುನಾಡ ಹಾಡು).

—ಸಿಪಿಕೆ, ಮೈಸೂರು

### ಅಭಿಮಾನದ ಸಂಗತಿ

ವಿಜ್ಞಾನಲೋಕದ ಕನ್ನಡ ತಾರೆಯರ (ಕನ್ನಡ ಸಾರಥಿಗಳು) ಕುರಿತು ಓದಿ ಹೆಮ್ಮೆ ಅನಿಸಿತು. ಕನ್ನಡವೇ ಉಸಿರೆನ್ನುವ ನನ್ನಂಥವರಿಗೆ ಹೆಮ್ಮೆಯ ಸಂಗತಿ.

—ಕೆ.ಎಂ. ಮಧ್ವರಾಯ

### ಮೆರುಗು ತಂದ ನಕ್ಷತ್ರಗಳು

ವಿಜ್ಞಾನಕ್ಷೇತ್ರದಲ್ಲಿನ ಕನ್ನಡದ ಅನರ್ಘ್ಯ ರತ್ನಗಳ ಸಾಧನೆಯನ್ನು ಪರಿಚಯಿಸಿ ಮುಂದಿನ ಪೀಳಿಗೆಗೆ ಸ್ಫೂರ್ತಿ ತುಂಬಿದ್ದಾರೆ. ಕನಿಷ್ಠ ಸೌಲಭ್ಯಗಳಲ್ಲಿ ಬೇರೆ ದೇಶಗಳ ವಿಜ್ಞಾನಿಗಳಿಗೆ ಸರಿಸಾಟಿಯಾಗಿ ಸಂಶೋಧನೆ ಮಾಡಿ ಯಶಸ್ಸು ಮುಡಿಗೇರಿಸಿಕೊಂಡಿದ್ದು ಮಹಾ ಸಾಧನೆ. ಸರ್ಕಾರ ಪಠ್ಯಪುಸ್ತಕಗಳಲ್ಲಿ ಇವರ ಯಶೋಗಾಥೆ ಪರಿಚಯಿಸುವ ಕಾರ್ಯವನ್ನು ಸರ್ಕಾರ ಮಾಡಬೇಕು.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

### ಸುಂದರ ಪ್ರಸ್ತುತಿ

‘ಎಲ್ಲೆಲ್ಲೂ ಹುಡುಕಿದೆ’ (ಮಾ. 06, ಶ್ರೀರಂಜನಿ ಅಡಿಗ) ಓದಿ ನಕ್ಕು ನಕ್ಕು ಸುಸ್ತಾಯ್ತು. ಬಹಳ ಸೊಗಸಾದ ಶೈಲಿಯಲ್ಲಿ ಪ್ರಸ್ತುತಪಡಿಸಿದ್ದಾರೆ.

—ಕೆ.ಎ. ಸೌಮ್ಯ, ಮೈಸೂರು

### ಉಜ್ವಲತಾಂಕ?

‘ಕತ್ತಲೆಗೊಂದು ರಕ್ಷಿತ ತಾಣ’ (ಮಾ. 06, ಕೆ.ಎಸ್. ನಟರಾಜ್) ಲೇಖನದಲ್ಲಿ ‘ಉಜ್ವಲತಾಂಕ’ (star magnitude) ಎಂಬ ಪದ ಬಳಕೆ ಮಾಡಲಾಗಿದೆ. ಇದನ್ನು ವಿವರಿಸುತ್ತಾ ಲೇಖಕರು ‘ತುಂಬ ಪ್ರಕಾಶಮಾನವಿರುವ ನಕ್ಷತ್ರದ ಉಜ್ವಲತಾಂಕವು 1 ಎಂದಿಟ್ಟುಕೊಂಡರೆ, ಅದರ ಹೊಳಪು ಕಡಿಮೆಯಾಗುತ್ತಿದ್ದಂತೆ, ಅಂಕವು ಹೆಚ್ಚಾಗುತ್ತಾ ಹೋಗುತ್ತದೆ’ ಎಂದು ತಿಳಿಸಿದ್ದಾರೆ. ಸಾಮಾನ್ಯ ಜನರಲ್ಲಿರುವ ತಿಳಿವಳಿಕೆ, ಅಂಕದ ಮೌಲ್ಯ ಹೆಚ್ಚಾದಷ್ಟೂ ಗುಣಮಟ್ಟ (ಹೊಳಪು, ಉಜ್ವಲತೆ, ಶುದ್ಧತೆ ಇತ್ಯಾದಿ) ಹೆಚ್ಚಾಗಿರುವುದೆಂದು. ಹೀಗಾಗಿ, ಹೊಸ ಪದವನ್ನು ಸೃಷ್ಟಿಸುವಾಗ ಇದನ್ನು ಗಮನದಲ್ಲಿಟ್ಟುಕೊಳ್ಳುವುದು ಸೂಕ್ತವಲ್ಲವೇ?

ಇದೇ ಸಮಸ್ಯೆಯನ್ನು ವಾಯು ಶುದ್ಧತಾಂಕದಲ್ಲೂ ಕಾಣಬಹುದು. AQI (Air Quality Index) ಮೌಲ್ಯ ಹೆಚ್ಚಾದಷ್ಟೂ ಶುದ್ಧತೆಯು ಕುಸಿಯುತ್ತದೆ. ಆದರೆ ಸಾಮಾನ್ಯ ಜನರಿಗೆ ಇದು ಬೇಗ ಅರ್ಥವಾಗುವುದಿಲ್ಲ. ವಾಯುಗುಣತಾಂಕವು ಹೆಚ್ಚಾದಷ್ಟೂ ಗುಣ (ಶುದ್ಧತೆ) ಹೆಚ್ಚುತ್ತದೆ ಎಂಬ ಅರಿವು ಅನಾದಿಯಿಂದಲೂ ಬಲವಾಗಿ ಮೂಡಿದೆ. AQIಗೆ ಬದಲಾಗಿ Air Impurity Index(AII) ಎಂದು ಬಳಸಿದರೆ, ಈ ಸಮಸ್ಯೆಯನ್ನು ಸುಲಭವಾಗಿ ನಿವಾರಿಸಬಹುದಲ್ಲವೇ?

— ಬಿ.ಎಸ್. ಶಂಕರ, ಮೈಸೂರು

### ಬೆಂಕಿಗೂಡುಗಳಲ್ಲ...

‘ಕರಾವಳಿಯ ಕೌತುಕದ ಬೆಂಕಿಗೂಡು’ (ಮಾ. 06, ರಮಣ್ ಶೆಟ್ಟಿ ರೆಂಜಾಳ) ಲೇಖನದಲ್ಲಿ ಕಲ್ಪಿತ ಅಂಶಗಳಿವೆ. ಲೇಖಕರು ಈ ಕಲ್ಲಿನ ರಚನೆಯನ್ನು ಬೆಂಕಿಗೂಡು (ಅಗ್ಗಿಷ್ಟಿಕೆ), ಕಾಡಿನಿಂದ ನಾಡಿಗೆ ಇಳಿಯುವ ಪ್ರಾಣಿಗಳನ್ನು ತಡೆಯಲು ಕಟ್ಟಿದ ‘ಹೊಗೆಗೂಡು’ ಎನ್ನುವ ಸಾಮಾನ್ಯ ಅರ್ಥದಲ್ಲಿ ವಿವರಿಸಿದ್ದಾರೆ. ಇದಕ್ಕೆ ಪುರಾಣ, ವಲಸೆ ಕಥೆಗಳನ್ನೂ ವಿವರಿಸಿದ್ದಾರೆ.

ಆದರೆ ಇದು ಕರ್ನಾಟಕದ ಹಲವೆಡೆ ಕಂಡುಬರುವ, ‘Dolmens’ಗಳೆಂದು ಕರೆಯುವ, ಕಬ್ಬಿಣಯುಗ – ಬೃಹತ್ ಶಿಲಾಯುಗ ಕಾಲದ ಸಮಾಧಿಗಳು. ಪ್ರದೇಶಗಳಿಗನುಗುಣವಾಗಿ ಈ ಸಮಾಧಿಗೆ ಬಳಸುವ ಕಲ್ಲು ಮತ್ತು ಅದರ ರಚನೆಯಲ್ಲಿ ವ್ಯತ್ಯಾಸವಿದೆ. ಇಂಥ ರಚನೆಗಳನ್ನು ಕರ್ನಾಟಕದ ದೊಡ್ಡಮಳತೆ (ಮೋರಿ ಬೆಟ್ಟ ಸೋಮವಾರಪೇಟೆ, ಕೊಡಗು), ಹಿರೇಬೆನಕಲ್ಲು (ಗಂಗಾವತಿ, ಕೊಪ್ಪಳ), ಸಾವನದುರ್ಗ (ಮಾಗಡಿ, ರಾಮನಗರ), ಮೇಗುತಿ ಬೆಟ್ಟ (ಐಹೊಳೆ)ಗಳಲ್ಲಿ ಕಾಣಬಹುದು. ಕರಾವಳಿ ಪ್ರದೇಶಗಳಲ್ಲೂ ಇವೆ. ಇದಕ್ಕೆ ಸಂಬಂಧಪಟ್ಟಂತೆ ಕರ್ನಾಟಕದ ಕೆಲವು ಭಾಗಗಳಲ್ಲಿ ಉತ್ಖನನ, ಸಂಶೋಧನೆಗಳೂ ನಡೆದಿವೆ. ಲೇಖಕರ ವಿವರಣೆ ಐತಿಹಾಸಿಕ ಸಂಶೋಧನೆಯಾಗಿರದೇ ಊಹಾತ್ಮಕ ವಿಚಾರಗಳಾಗಿವೆ.

—ವಿ. ಶೋಭಾ, ಸುಂದರ ಕೇನಾಜೆ,
ಎಂ.ಸಿ ಮನೋಹರ

### ‘ಕುಂಟೋಬಿಲ್ಲೆ’ ನೆನಪಿಸಿತು

‘ಅಮಟೆ... ಎಸ್’ (ಮಾ. 06, ಸುಮಾ ರಮೇಶ್) ಓದಿ ಅಬ್ಬಬ್ಬಾ ಎನಿಸಿತು. ಕೆಲ ಸಮಯದ ಹಿಂದೆ ನಾನು ಊಹಿಸಿದ್ದ ಅಮಟೆಯ ಮೂಲವನ್ನೇ ಉಲ್ಲೇಖಿಸಿದ್ದಾರೆ. ತಂಗಿಯರೊಂದಿಗೆ ‘ಕುಂಟೋಬಿಲ್ಲೆ’ ಆಡುತ್ತಿದ್ದ ದಿನಗಳನ್ನು ನೆನಪಿಸಿತು.

—ಶೃಂಗೇರಿ ಲೋಕೇಶ್, ಬೆಂಗಳೂರು

### ಜಬರ್ದಸ್ತ್ ಆಟಗಳು

ಟೀವಿ ಇರದ ದಿನಗಳವು. ನಾವಿದ್ದ ಕ್ವಾರ್ಟರ್ಸ್‌ನಲ್ಲಿ ಸ್ನೇಹಿತೆಯರು ಕೂಡಿ ಲಗೋರಿ, ಕಣ್ಣಾಮುಚ್ಚಾಲೆ, ಕುಂಟೋಬಿಲ್ಲೆ ಆಟಗಳನ್ನು ಜಬರ್ದಸ್ತ್ ಆಗಿ ಆಡುತ್ತಿದ್ದೆವು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

### ಆಮ್ ಐ ರೈಟ್?

ನನ್ನ ಇಂದಿನ ಒಳ್ಳೆಯ ಆರೋಗ್ಯಕ್ಕೆ ನಾನು ಆ ದಿನಗಳಲ್ಲಿ ಆಡುತ್ತಿದ್ದ ಕುಂಟೋಬಿಲ್ಲೆ



ಆಟದ ವ್ಯಾಯಾಮವೇ ಕಾರಣವಿರಬಹುದು. ಶಾಲೆಗಳಲ್ಲಿ ಈ ಆಟ ಆಡಿಸಿದರೆ ಮಕ್ಕಳ ಮೊಬೈಲ್ ಗೀಳು ಕಡಿಮೆ ಆಗಬಹುದೇನೋ?

—ವೀಣಾ ಶಂಕರ್, ಬೆಂಗಳೂರು

### ರಿಂಗಣಿಸುವ ಬಾಲ್ಯ

ಸುಮಾರು 50 ವರ್ಷಗಳ ಹಿಂದೆ ರಸ್ತೆಯೇ ಮೈದಾನ. ಕ್ರಿಕೆಟ್, ಸೂರ್ಚೆಂಡು, ಲಗೋರಿ, ಕುಂಟೋಬಿಲ್ಲೆ ಆಟಗಳು ಮುದ ನೀಡುತ್ತಿದ್ದವು. ಈಗಲೂ ರೈಟೋ ಬಚ್ಚಾ ಕಿವಿಯಲ್ಲಿ ರಿಂಗಣಿಸುತ್ತದೆ.

—ಡಿ. ಶ್ರೀಕಾಂತ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in